# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕ್ರಮಾಂಕ: ಬೆವಿಕಂ/ಬಿಸಿ31/2602/ಸಂ-1/2014-15/350

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು – 560001,
ದಿನಾಂಕ: 20 AUG 2015

ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),
ಕಾ ಮತ್ತು ಪಾ,
ಬೆವಿಕಂ.,

ಮಾನ್ಯರೇ,

ವಿಷಯ: 2016-17ನೇ ಸಾಲಿನಲ್ಲಿ ಬೆವಿಕಂ ಸೇವೆಯಿಂದ ವಯೋನಿವೃತ್ತಿ ಹೊಂದಲಿರುವ 'ಸಿ' ಮತ್ತು 'ಡಿ' ಗುಂಪಿನ ನೌಕರರ ವಿವರಗಳನ್ನು ಒದಗಿಸುವ ಬಗ್ಗೆ.

*****

ಕಂಪನಿ ವ್ಯಾಪ್ತಿಯಲ್ಲಿ (ಕವಿಪ್ರನಿನಿ ನೌಕರರನ್ನೊಳಗೊಂಡಂತೆ) 2016-17 ರ ಆರ್ಥಿಕ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ 'ಸಿ' ಮತ್ತು 'ಡಿ' ದರ್ಜೆಯ ನೌಕರರ ವಿವರಗಳ ಪಟ್ಟಿಯನ್ನು ತಯಾರಿಸಿ, ಅಧಿಸೂಚನೆ ಹೊರಡಿಸಬೇಕಾಗಿರುವುದರಿಂದ ತಮ್ಮ ವೃತ್ತ ವ್ಯಾಪ್ತಿಯಲ್ಲಿ (ಕವಿಪ್ರನಿನಿಯ ಕಛೇರಿಗಳನ್ನೊಳಗೊಂಡಂತೆ) ಕಂಪನಿಯ ಎಲ್ಲಾ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 'ಸಿ' ಮತ್ತು 'ಡಿ' ಗುಂಪಿನ ವಯೋನಿವೃತ್ತಿ ಹೊಂದಲಿರುವ ನೌಕರರ ವಿವರಗಳನ್ನು ಕೆಳಕಂಡ ನಮೂನೆಯಲ್ಲಿ ಕಛೇರಿವಾರು ಕ್ರೋಡೀಕರಿಸಿ ಕಂಪನಿ ಕಾರ್ಯಾಲಯಕ್ಕೆ ದಿನಾಂಕ: 25.09.2015 ರೊಳಗೆ ಒದಗಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ:-

| ಕ್ರ.ಸಂ | ನೌಕರನ ಹೆಸರು | ಪದನಾಮ | ಕಾರ್ಯನಿರ್ವಹಿಸುತ್ತಿರುವ ಸ್ಥಳ | ನೌಕರನ ಹುಟ್ಟಿದ ದಿನಾಂಕ | ನೌಕರನು ವಯೋನಿವೃತ್ತಿ ಹೊಂದುವ ದಿನಾಂಕ |
|---|---|---|---|---|---|
| 1 | | | | | |
| 2 | | | | | |

ಮುಂದುವರೆದಂತೆ, ವಿವರಗಳನ್ನು ಕಳುಹಿಸುವ ಮುನ್ನ ಸಂಬಂಧಿಸಿದ ಅಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ಕಳುಹಿಸಲು ಹಾಗೂ ಯಾವುದೇ ವಿಭಾಗ/ವೃತ್ತ/ವಲಯ/ಕವಿಪ್ರನಿನಿ ಕಛೇರಿಗಳಲ್ಲಿ ಈ ಸಾಲಿನಲ್ಲಿ ವಯೋನಿವೃತ್ತಿಗೊಳ್ಳುವ ಯಾವುದೇ ನೌಕರರು ಇಲ್ಲದಿದ್ದ ಪಕ್ಷದಲ್ಲಿ ನಿವೃತ್ತಿಹೊಂದುವ ನೌಕರರಿಲ್ಲವೆಂದು ಪಟ್ಟಿಯನ್ನು ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

(ಎಂ.ಟಿ ಶರಣಪ್ಪ)
ಪ್ರಭಾರ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಬೆ.ವಿ.ಕಂ., ಬೆಂಗಳೂರು

ಪ್ರತಿಗಳು:

1. ಆಪ್ತ ಕಾರ್ಯದರ್ಶಿಗಳು: ನಿರ್ದೇಶಕರು(ಆ ಮತ್ತು ಮಾ.ಸಂ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಬೆವಿಕಂ ಅಂತರ್ಜಾಲ.